ಪ್ರಾಸಾ-2 ರವರನ್ನು ಪುನಃ ಕರೆಸಿ
ಪ್ರಮಾಣ ವಚನ ಬೋಧಿಸಲಾಯಿತು.
ದಿನಾಂಕಃ 17.01.2017

ಪಾಟೀಸವಾಲುಃ ಶ್ರೀ ಎ.ಎಚ್.ಬಿ. ವಕೀಲರಿಂದಃ ಆಪಾದಿತರ ಪರಃ

1998ರಿಂದ 1ನೇ ಸಾಕ್ಷಿ ಡಾಕ್ಟರ್ ಶಶಿಧರ್ ಪರಿಚಯ. ಈ ಕೇಸಿನಲ್ಲಿ ಮಹಜರ್‌ಗೆ ಬರುವಂತೆ ಪೊಲೀಸರು ನನಗೆ ಲಿಖಿತ ನೋಟೀಸು ನೀಡಿರಲಿಲ್ಲ. ಸದರಿ ಸ್ಥಳಕ್ಕೆ ಹೋಗುವ ಸುಮಾರು ವರ್ಷಗಳಿಂದ 1ನೇ ಆರೋಪಿ ಇಟ್ಟದ್ದ ಮೆಡಿಕಲ್ಸ್ ನೋಡಿದ್ದೆ. ನಾನು ಅಲ್ಲಿಗೆ ಹೋದಾಗ ಮಧ್ಯಾಹ್ನ 3-00 ಗಂಟೆ ಆಗಿತ್ತು. ನಾನು ನನ್ನ ಕ್ಲಿನಿಕ್‌ನಿಂದ ನೇರವಾಗಿ 1ನೇ ಆರೋಪಿಯ ಮೆಡಿಕಲ್ಸ್‌ಗೆ ಹೋಗಿದ್ದೇನೆ. ಸದರಿ ಶಾಪ್‌ನಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಎಂ.ಒ.4ರಿಂದ 6 ಸಿ.ಪಿ.ಯು.ಗಳನ್ನು ಯಾರು ಹ್ಯಾಂಡಲ್ ಮಾಡುತ್ತಿದ್ದರು ಎಂಬುದೂ ನನಗೆ ಗೊತ್ತಿಲ್ಲ. ಈ ಮೂರೂ ಸಿ.ಪಿ.ಯು.ಗಳಿಗೂ ಡೆಸ್ಕ್‌ಟಾಪ್‌ಗಳು ಇದ್ದವು. ಅವುಗಳನ್ನು ಯಾರು ಹ್ಯಾಂಡಲ್ ಮಾಡುತ್ತಿದ್ದರು ಎಂಬುದೂ ಗೊತ್ತಿಲ್ಲ. ನಾನು ಸಹಿ ಮಾಡುವ ಮೊದಲು ಡಾಃರತ್ನಾಕರ ರವರು ಸಹಿ ಮಾಡಿದ್ದರು. ನೀವು, ಡಾಃರತ್ನಾಕರ ಮತ್ತು ಶಶಿಧರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ. ನಾನು ಎನ್.ಎಸ್.ಮೆಡಿಕಲ್ಸ್ ಶಾಪ್‌ಗೆ ಹೋಗಿಲ್ಲ ಮತ್ತು ಎಂ.ಒ.4ರಿಂದ 6 ನನ್ನ ಸಮ್ಮುಖ ನಿಪಿ-7ರಡಿ ಅಮಾನತ್ತುಪಡಿಸಿಕೊಂಡಿಲ್ಲ ಎಂಬುದು ಸರಿಯಲ್ಲ. ಡಾಃ ಶಶಿಧರ್ ಮತ್ತು ಪೊಲೀಸರ ಮಾತುಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂಬುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಅವರು ಹೇಳಿದಂತೆ ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ಹಾಗೂ
ಸ್ಪೆಷಲ್ ನ್ಯಾಯಾಧೀಶರು, ಹಾಸನ.